

ಮಗದಾನ್ ರಸ್ತೆ

ಚಳಿ ಚಳಿ.. ಎನ್ನುತ್ತೀರಾ? ಸೈಬೀರಿಯಾಗೆ ಹೋಗಿ ಬನ್ನಿ, ಕಣ್ಣ ರೆಪ್ಪೆ ಶೀತದಿಂದ ಮರಗಟ್ಟುತ್ತದೆ. ಕೈಗಳಿಗೆ ಹಾಕಿದ ಗ್ಲೋವ್ಸ್ ಬಿಚ್ಚಿದರೆ ಬೆರಳುಗಳ ಮತ್ತೆ ಮಡಚಲು ಆಗುವುದೇ ಇಲ್ಲ. ಹೊರಗಡೆ ಅಂಗಡಿಗೆ ಹೊರಟರೆ ನಿಮಿಷದಲ್ಲೇ ಚಳಿ ಮೂಳೆಯೊಳಗೆ ನುಗ್ಗಿ ಅಳು ಬರುವಂತಾಗುತ್ತದೆ. 'ಅಯ್ಯೋ, ಖಂಡಿತ ಸೈಬೀರಿಯಾಗೆ ಮಾತ್ರ ಹೋಗಲ್ಲ' ಅಂತೀರಾ?

ಧಾರವಾಡದಲ್ಲಿ ಹುಟ್ಟಿ, ಬೆಂಗಳೂರಿನಲ್ಲಿ ಬೆಳೆದ ನಿಧಿ ತಿವಾರಿ, ಸೈಬೀರಿಯಾಗೆ ಹೋಗಿ ಬಂದು ಇದುವರೆಗೂ ಯಾವ ಭಾರತೀಯರೂ ಮಾಡದ ಸಾಹಸವನ್ನು ಮಾಡಿ ಜೈ ಎನಿಸಿಕೊಂಡಿದ್ದಾರೆ. ಕಳೆದ ಡಿಸೆಂಬರ್ ತಿಂಗಳಲ್ಲಿ ಸೈಬೀರಿಯಾದ ಊಹಿಸಲೂ ಅಸಾಧ್ಯವಾದ –50 ಡಿಗ್ರಿ ತೀವ್ರ ಶೀತ ಪ್ರದೇಶದಲ್ಲಿ ಒಬ್ಬರೇ ಫೋರ್ ವೀಲ್ ಡ್ರೈವ್ ವಾಹನವನ್ನು 'ಹೈವೆ ಆಫ್ ಬೋನ್ಸ್' ಹೆದ್ದಾರಿಯಲ್ಲಿ ಉದ್ದಗಲ ನಡೆಸಿ ಎರಡು ವಾರ ಕಳೆದಿದ್ದಾರೆ. ತಮ್ಮ ಏಕಾಂಗಿ ವಾಹನ ಯಾತ್ರೆಯಲ್ಲಿ 5000 ಕಿಲೋಮೀಟರ್ ಕ್ರಮಿಸಿ, ಕೊಲಿಮಾ ಹೈವೇ, 'ಪೋಲ್ ಆಫ್ ಕೋಲ್ಡ್' ಅನ್ನು ಮುಟ್ಟಿ ತಮ್ಮ ಕನಸನ್ನು ನಿಜವಾಗಿಸಿಕೊಂಡಿದ್ದಾರೆ.

ಸೈಬೀರಿಯಾದ ಪಟ್ಟಣವಾದ ಒಯ್ಮ್ಯಾಕೊನ್ ವಸತಿ ಪ್ರದೇಶ, ಈ ಭೂಮಿಯಲ್ಲೇ ಮನುಷ್ಯರು ವಾಸಿಸುವ ಅತ್ಯಂತ ಶೀತಲ ಪ್ರದೇಶ ಎಂದು ಹೆಸರಾಗಿದೆ. ಅಲ್ಲದೆ ನಿಧಿ ಪ್ರಯಾಣ ಮಾಡಿದ ಯಾಕಟ್ಸ್ಕ್ ನಿಂದ ಮಗದೊನಿಸ್ ವರೆಗಿನ ರಸ್ತೆ ನಮ್ಮ ಪ್ರಪಂಚದ ಅತ್ಯಂತ ಅಪಾಯಕಾರಿ ದಾರಿ ಎಂದೂ ಗುರುತಿಸಲ್ಪಟ್ಟಿದೆ. ಕಾರಣ ಆ ಹೆದ್ದಾರಿ ರಚಿತವಾಗಿರುವುದು ಶಾಶ್ವತವಾಗಿ ಹೆಪ್ಪುಗಟ್ಟಿ ಹಿಮವಾಗಿರುವ ನದಿಗಳ ಮೇಲೆ!

'ಇಂತಹ ಅಪೂರ್ವ ಸಾಹಸ ಪ್ರಯಾಣದ ಯೋಚನೆ ಹೇಗೆ ಬಂತು? ಅದೂ ಒಬ್ಬರೇ ಕಾರು ಚಲಾಯಿಸುತ್ತಾ ಸಾವಿರಾರು ಮೈಲಿಗಳನ್ನು ಆ ಹವಾಮಾನ ವೈಪರೀತ್ಯದಲ್ಲಿ ಕಳೆದಿದ್ದು ಹೇಗೆ?' ಎಂದು ಕೇಳಿದರೆ, 'ಅಯ್ಯೋ, ಇದಕ್ಕಾಗಿ ನಾನು ತಪಸ್ಸು ಮಾಡಿದ್ದೆ' ಎಂದರು ನಿಧಿ! 'ನನ್ನನ್ನು ನಾನು ಚಾಲೆಂಜ್ ಮಾಡಿಕೊಳ್ಳುವುದು ನನಗೆ ಅಭ್ಯಾಸವಾಗಿದೆ, ಇಲ್ಲವಾದರೆ ಜೀವನ ಬೋರ್ ಅನ್ನಿಸುತ್ತದೆ! ಮುಂಚಿನಿಂದಲೂ ನಾನು ಒಂಥರಾ ವೈಲ್ಡ್ ಸ್ವಭಾವದವಳು' ಎಂದು ನಿಧಿ ಮನಸ್ಸು ಬಿಚ್ಚಿ ಮಾತನಾಡಿದರು.



ಗಂಟೆ ಗೋಪುರ

ನಿಧಿ (ಮೂಲ ಹೆಸರು– ಲಕ್ಷ್ಮಿ ಸಾಲ್ಗಮೇ)ಯ ತಾಯಿ ಮೈಕ್ರೋಬಯಾಲಜಿಸ್ಟ್, ತಂದೆ ಬಾಷ್ ಕಂಪನಿಯಲ್ಲಿ ಎಂಜಿನಿಯರ್. ಮಧ್ಯವರ್ಗದ ಕುಟುಂಬದ ನಿಧಿ, ಏಳು ವರ್ಷದ ಹುಡುಗಿ ಇದ್ದಾಗಿಲಿಂದಲೂ ಬೆಂಗಳೂರಿನ ಆಸುಪಾಸು ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಭೂತಾನ್ ಮತ್ತು ಹಿಮಾಲಯ ಪರ್ವತಗಳ ಚಾರಣ ಯಾತ್ರೆಯಲ್ಲಿ ಪಾಲ್ಗೊಂಡ ಈ ಹನ್ನೊಂದು ವರ್ಷದ ಹುಡುಗಿಗೆ ಹೊರಾಂಗಣ ಚಟುವಟಿಕೆಗಳ ಬಗ್ಗೆ ಆಳವಾದ ಆಸಕ್ತಿ ಮೊಳಕೆಯೊಡೆಯಿತು. ಕಾಲೇಜಿಗೆ ಬರುವಷ್ಟರಲ್ಲಿ ಪಶ್ಚಿಮ ಘಟ್ಟಗಳಲ್ಲಿ ನಡೆಸುವ ಚಾರಣಗಳನ್ನು ತನ್ನದೇ ನಾಯಕತ್ವದಲ್ಲಿ ನಡೆಸುವಷ್ಟು ಪಳಗಿದ್ದರು. ಹೊನ್ನೆಮರಡುವಿನ ದಿ ಅಡ್ವೆಂಚರರ್ಸ್ (The Adventurers) ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾಗ ತಮ್ಮ ಬಟಾಲಿಯನ್ ಸೈನಿಕರಿಗೆ ಹೊರಾಂಗಣ ಚಟುವಟಿಕೆಗಳಲ್ಲಿ ತರಬೇತಿ ಕೊಡಿಸಲು ಕರೆದುಕೊಂಡು ಬಂದ ಭಾರತೀಯ ಸೇನೆಯ ಕರ್ನಲ್ ರನ್ನು ಪ್ರೀತಿಸಿ ಮದುವೆಯಾದರು.

ಕರ್ನಲ್ ಸಾಹೇಬರಿಗೂ ತನ್ನಂತೆಯೇ ಹೊರಾಂಗಣ, ಸಾಹಸಗಳಲ್ಲಿ ಆಸಕ್ತಿಯಿದೆ. ತಾವಿಬ್ಬರೂ ಸಮಾನಮನಸ್ಕರು ಎಂದು ಅರಿವಾದಾಗ ಒಬ್ಬರಿಗೊಬ್ಬರು ಜೊತೆಯಾಗಿ ಬೆಂಬಲ ಕೊಡುವ ದಿನನಿತ್ಯದ ಜೀವನ ಸುಲಭವಾಯಿತು. ಜೊತೆಗೆ ತಂದೆತಾಯಿಯರ ಬೆಂಬಲವೂ ಸದಾ ಇತ್ತು. ಈಗ ಎರಡು ಗಂಡು ಮಕ್ಕಳ ತಾಯಿಯಾಗಿರುವ ನಿಧಿ ತಮ್ಮ ಪತಿಯ ಸೈನಿಕ ಸೇವೆಯ ಕಾರಣ ದೆಹಲಿಯಲ್ಲಿ ನೆಲೆಸಿದ್ದಾರೆ.

'ಮೊದಲ ಮಗ ಹುಟ್ಟಿದ ಮೇಲೆ ಮಗುವನ್ನು ಬೆನ್ನ ಮೇಲೆ ಹೊತ್ತು ನಾನು ಮತ್ತು ಪತಿ ಅನೇಕ ಚಾರಣಗಳು, ಪ್ರಕೃತಿಯಲ್ಲಿ ಕ್ಯಾಂಪ್ ಹಾಕುವುದು, ಸಾಹಸ ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದು ಮಾಡುತ್ತಿದ್ದೆವು. ಎರಡನೆಯ ಮಗ ಹುಟ್ಟಿದ ಮೇಲೆ ಸ್ವಲ್ಪ ಕಷ್ಟವಾಯಿತು. ಆಗ ನನ್ನ ಆಸಕ್ತಿ ಈ ಜೀಪ್ (ಓವರ್ ಲ್ಯಾಂಡರ್) ಡ್ರೈವಿಂಗ್ ಕಡೆ ಹೊರಳಿತು. ಹೇಗೂ ಪಶ್ಚಿಮ ಘಟ್ಟಗಳಲ್ಲಿ ಜೀಪ್ ಓಡಿಸಿ ಪಳಗಿದ್ದೆ. ಅದು ಉಪಯೋಗಕ್ಕೆ ಬಂತು. 2005–6ರಲ್ಲಿ ನಿರ್ಣಾಯಕ ವರ್ಷವಾಯಿತು. ನಾಲ್ಕೈದು ತಿಂಗಳು ಬೆಂಗಳೂರಿನ ಲಾಲ್‌ಬಾಗ್ ರಸ್ತೆಯ ಗ್ಯಾರೇಜಿನಲ್ಲಿ ಫೋರ್ ವೀಲ್ ಡ್ರೈವ್ ಗಳ ರಚನೆ, ಭಾಗಗಳು, ರಿಪೇರಿ ಮುಂತಾದ ತರಬೇತಿ ಪಡೆದೆ. ಆಗ ಸಾಕಷ್ಟು ಧೈರ್ಯ, ವಿಶ್ವಾಸ ಬಂತು' ಎನ್ನುತ್ತಾರೆ ನಿಧಿ.

2007ರಲ್ಲಿ ಬೆಂಗಳೂರಿನಿಂದ ಲಡಾಖ್ ಗೆ ಚತುಷ್ಚಕ್ರ ವಾಹನವನ್ನು ಡ್ರೈವ್ ಮಾಡಿದರು. ಆ ದಾರಿ ಮತ್ತು ವಾಹನ ಯಾತ್ರೆ ಹೊಸದಲ್ಲವಾದರೂ ಹೆಣ್ಣೊಬ್ಬಳು ಮಾಡಿದ ಸಾಧನೆಯನ್ನು 'ಆಫ್ ರೋಡ್ ಡ್ರೈವರ್' ಗಳ ಪ್ರಪಂಚ



ಗುರಿ ತಲುಪಿದ ಸಂತಸದಲ್ಲಿ ನಿಧಿ